# Telephone Conversation between PM and President of the Republic of Uganda

April 09, 2020

## ಪ್ರಧಾನ  ಮಂತ್ರಿ ಮತ್ತು ಉಗಾಂಡಾ ಗಣರಾಜ್ಯದ ಅಧ್ಯಕ್ಷರ ನಡುವಿನ ದೂರವಾಣಿ ಸಂಭಾಷಣೆ

ಏಪ್ರಿಲ್ 09, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಯವರು ಉಗಾಂಡಾ ಗಣರಾಜ್ಯದ ಅಧ್ಯಕ್ಷ ಯೋವೆರಿ ಕಗುಟಾ ಮುಸೆವೆನಿ ರೊಂದಿಗೆ  ಇಂದು ದೂರವಾಣಿ ಸಂಭಾಷಣೆ ನಡೆಸಿದರು.

ಕೋವಿಡ್-19 ಸಾಂಕ್ರಾಮಿಕ  ರೋಗದಿಂದ ಉಂಟಾಗುವ ಆರೋಗ್ಯ ಮತ್ತು ಆರ್ಥಿಕ ಸವಾಲುಗಳನ್ನು ಇಬ್ಬರು ನಾಯಕರು ಚರ್ಚಿಸಿದರು. ಪ್ರಸ್ತುತ ಆರೋಗ್ಯ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತವು ಆಫ್ರಿಕಾದಲ್ಲಿ ತನ್ನ ಸ್ನೇಹಿತರೊಂದಿಗೆ ಐಕಮತ್ಯದಲ್ಲಿ ನಿಂತಿದೆ ಮತ್ತು ಉಗಾಂಡಾದ ಸರ್ಕಾರವು ತನ್ನ ಭೂಪ್ರದೇಶದಲ್ಲಿ ವೈರಸ್ ಹರಡುವುದನ್ನು ನಿಯಂತ್ರಿಸುವ ಪ್ರಯತ್ನಗಳಿಗೆ ಸಾಧ್ಯವಿರುವ ಎಲ್ಲಾ ಬೆಂಬಲವನ್ನು ನೀಡುತ್ತದೆ ಎಂದು ಶ್ರೇಷ್ಠ ಅಧ್ಯಕ್ಷ ಮುಸೆವೆನಿ ರವರಿಗೆ  ಪ್ರಧಾನ ಮಂತ್ರಿಯವರು  ಹೇಳಿದ್ದಾರೆ.

ಪ್ರಸ್ತುತ ಪರಿಸ್ಥಿತಿಯನ್ನು ಒಳಗೊಂಡಂತೆ ಆತಿಥೇಯ ಸರ್ಕಾರ ಮತ್ತು ಸಮಾಜವು ಉಗಾಂಡಾದ ಭಾರತೀಯ ವಲಸೆಗಾರರಿಗೆ ನೀಡಿದ ಸೌಹಾರ್ದತೆ ಮತ್ತು ಕಾಳಜಿಯ ಬಗ್ಗೆ ಪ್ರಧಾನ ಮಂತ್ರಿ ಯವರು  ಮೆಚ್ಚುಗೆ ವ್ಯಕ್ತಪಡಿಸಿದರು.

ಜುಲೈ 2018 ರಲ್ಲಿ ಪ್ರಧಾನ ಮಂತ್ರಿ ಯವರು  ಉಗಾಂಡಾ ಭೇಟಿಯನ್ನು ಮತ್ತು ಭಾರತ-ಉಗಾಂಡಾ ಸಂಬಂಧಗಳ ವಿಶೇಷ ಸ್ವರೂಪವನ್ನು ನೆನಪಿಸಿಕೊಂಡರು.

ಕೋವಿಡ್-19 ರ ಸವಾಲಿನಿಂದ ಜಗತ್ತು ಶೀಘ್ರದಲ್ಲೇ ಮೇಲುಗೈ ಸಾಧಿಸುತ್ತದೆ ಎಂಬ ಭರವಸೆಯನ್ನು ಇಬ್ಬರು ನಾಯಕರು ಹಂಚಿಕೊಂಡರು.

**ನವ ದೆಹಲಿ**
**ಏಪ್ರಿಲ್ 09, 2020**

DISCLAIMER: This is an approximate translation. The original is available in English on MEA’s website and may be referred to as the official press release.